ಅ.ದಾ. ನಂ. 130/16 ಡಿ.ಡಬ್ಲ್ಯೂ-2

ದಿನಾಂಕಃ 10.02.2026 ರಂದು ಡಿ.ಡಬ್ಲ್ಯೂ-2ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

4. ನನ್ನ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಉತ್ತರಕ್ಕೆ ನನ್ನ ಜಮೀನಿದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ವಾದಿಯ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿರುವ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.69 ರ ಎಷ್ಟು ವಿಸ್ತೀರ್ಣದಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ ಎಂದರೆ 27 ಗುಂಟೆ. ಸದರಿ 27 ಗುಂಟೆ ಚೆಕ್ಕುಬಂದಿ ಏನು ಎಂದರೆ ಪೂ-ಮಳ್ಳೀರಯ್ಯ, ಪ-ಕೆಂಚಯ್ಯ, ದ-ಹೊಳೆ, ಉ-ಚೆನ್ನಯ್ಯರವರ ಜಮೀನು. ಸದರಿ ಚೆಕ್ಕುಬಂದಿಯನ್ನೇ ಒ.ಎಸ್.124/16 ರಲ್ಲೂ ತಿಳಿಸಿರುತ್ತೇವೆ ಎಂದರೆ ಸರಿಯಲ್ಲ. ಸ.ನಂ.69 ರಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂಬುದರ ಬಗ್ಗೆ ಕಾನೂನು ಕ್ರಮ ತೆಗೆದುಕೊಂಡಿದ್ದೀರ ಎಂದರೆ ಅರ್ಜಿ ನೀಡಿರುತ್ತೇವೆ ಆದರೆ ಮುಂದುವರೆದಿರುವುದಿಲ್ಲ. ಸದರಿ ಅರ್ಜಿಯನ್ನು ಹಾಜರುಪಡಿಸಿರುವುದಿಲ್ಲ. ಪ್ರತೀ ವರ್ಷ ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳ ಪರಿಶೀಲಿಸಿ ಆರ್.ಟಿ.ಸಿ ಯಲ್ಲಿ ಬೆಳೆಯ ಬಗ್ಗೆ ಸ್ವಾಧೀನದಾರರು ಮತ್ತು ಮಾಲೀಕರ ಬಗ್ಗೆ ನಮೂದಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಪಹಣಿ ವಾದಿ ಹೆಸರಿನಲ್ಲಿದೆ ಎಂದರೆ ಸರಿ. ಆರ್.ಟಿ.ಸಿ ಯ ಸ್ವಾಧೀನದಾರರ ಹೆಸರಿನಲ್ಲೂ ವಾದಿಯ ಹೆಸರಿದೆ ಎಂದರೆ ಸರಿ. ಪಹಣಿಯಲ್ಲಿ ಜೋಳ ಬೆಳೆದಿರುವ ನಮೂದಿಸಿರುತ್ತಾರೆ ಎಂದರೆ ಸರಿ. ಸ.ನಂ.69 ಕ್ಕೆ ಸಂಬಂಧಪಟ್ಟಂತೆ ಕಂದಾಯ ಕಟ್ಟಿದ್ದೀರ ಎಂದರೆ ಮಾಹಿತಿ ಇರುವುದಿಲ್ಲ. ಸಾಮಾನ್ಯವಾಗಿ ಅನಧಿಕೃತವಾಗಿ ಸ್ವಾಧೀನದಲ್ಲಿರುವ ಜಮೀನಿನ ಬಗ್ಗೆ ತಹಶೀಲ್ದಾರ್ ರವರು ಅರ್ಜಿಯ ಮೇಲೆ ವರದಿ ನೀಡುತ್ತಾರೆ ಎಂದರೆ ಸರಿ. ಸ.ನಂ.69 ರಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ತಹಶೀಲ್ದಾರ್ ಗೆ ಅರ್ಜಿ ನೀಡಿದ್ದೀರ ಎಂದರೆ ನಮ್ಮ ತಂದೆ ಇರುವಾಗ ನೀಡಿರುತ್ತಾರೆ. ನಾನು ನೀಡಿರುವುದಿಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾನು ಇರುವುದಿಲ್ಲ ಎಂದರೆ ಸರಿಯಲ್ಲ.

5. ಒ.ಎಸ್.456/18 ರಂತೆ ನಾವು ಯೋಗೇಶ ಕಾಳೇಗೌಡರ ವಿರುದ್ಧ ಸ.ನಂ.71/2 ರಲ್ಲಿ 27 ಗುಂಟೆಗೆ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಏನು ಚೆಕ್ಕುಬಂದಿ ನೀಡಿದ್ದೀರ ಎಂದರೆ ಪೂ-ಕೆಂಚಯ್ಯರವರ ಜಮೀನು, ಪ-ರಸ್ತೆ, ಉ-ಚೆನ್ನಯ್ಯ, ದ-ಜಯಂತಿರವರ ಜಮೀನು. ಈ ಹಿಂದೆ ಪಾಟೀಸವಾಲಿನಲ್ಲಿ ಸ.ನಂ.71/2 ರಲ್ಲಿ ತಿಳಿಸಿರುವ ಚೆಕ್ಕುಬಂದಿಗೂ ಈ ದಿನ ತಿಳಿಸಿರುವ ಚೆಕ್ಕುಬಂದಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸ್ವಾಧೀನದಲ್ಲಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಲಿಖಿತ ತಕರಾರು ಮತ್ತು ಪ್ರಮಾಣ ಪತ್ರಕ್ಕೂ ವ್ಯತಿರಿಕ್ತವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ವಾದಿ ತಹಶೀಲ್ದಾರ್ ಗೆ ನಿಪಿ 8 ರಂತೆ ನೋಟೀಸ್ ನೀಡಿದ ನಂತರ ನಾವು ವಾದಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನಮಗೆ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.